Grant of Land for Sugar Factory near Shimoga

350. SRI KADIDAL DIWAKAR (Thirthahalli).—Will the Minister for Revenue be pleased to state.—

(a) the extent of land granted by the Government to grow cane for private sugar factory near Shimoga;

(b) the extent of land granted to the said factory on lease basis to grow sugarcane;

(c) whether it has come to the notice of the Government that the said factory has enroached Government and private lands to the larger extent in addition to this land;

(d) whether land ceiling limit under the provisions of land Reforms Act does not apply to the land of the said factory ?

SRI MALLIKARJUN M. KHARGE (Minister for Revenue).—

(a) No land has been granted to Tungabhadra Sugar Factory except on lease basis to grow sugar-cane.

(b) 1503 acres 11 guntas.

(c) No

(d) Applicable.

ಶ್ರೀ ಕಡಿದಾಳ್ ದಿವಾಕರ್.—ಮಾನ್ಯ ಅಧ್ಯಕ್ಷರೇ, ನಾನು ಈ ಬಾಬ್ತಿನ ಮುಂದೆ ೧೯೭೮ರಿಂದ ಇದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಇದು ನನಗೆ ಗೊತ್ತಾಗಲಿಲ್ಲ ಇಲ್ಲದಿದ್ದರೆ ಇದನ್ನು ನಾನು ಅಡ್ಮಿಟ್ ಮಾಡುತ್ತಾ ಇರಲಿಲ್ಲ.

ಶ್ರೀ ಕಡಿದಾಳ್ ದಿವಾಕರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರೂ ಕೂಡ ಇದೇ ತರಹ ಉತ್ತರ ಕೊಡುತ್ತಿದ್ದಾರೆ. ಅಲ್ಲಿ ಬಹಳಷ್ಟು ಜಾಸ್ತಿ ಜಮೀನು ಇದೆ. ಅಲ್ಲಿ ಕೆಲವರು ಬಗರ್‌ಹುಕುಂ ಆಗಿ ಸಾಗುವಳಿ ಮಾಡುತ್ತಿದ್ದಾರೆ. ನಾನು ಇದನ್ನು ಮೊದಲಿನಿಂದಲೂ ಹೇಳುತ್ತಿದ್ದೇನೆ, ಅವರು ನ್ಯಾಯವಾದ ಉತ್ತರವನ್ನು ಕೊಡುತ್ತಾ ಇಲ್ಲ, ಸತ್ಯಕ್ಕೆ ದೂರವಾದ ಉತ್ತರವನ್ನು ಅವರು ಕೊಟ್ಟಿದ್ದಾರೆ.

ಅಧ್ಯಕ್ಷರು.—ನಿಮ್ಮ ಪ್ರಶ್ನೆಯಲ್ಲಿ ನೀವು ಏನು ಕೇಳಿದ್ದೀರಿ ಎಂಬುದನ್ನು ನೋಡಿ. ೧೫೦೩ ಎಕರೆ ೧೧ ಗುಂಟೆ ಜಮೀನು ಒತ್ತುವರಿ ಆಗಿದೆಯೇ ಎಂದು ಕೇಳಿದ್ದೀರಿ, ಅದಕ್ಕೆ ಅವರು 'ಇಲ್ಲ' ಎಂದು ಹೇಳಿದ್ದಾರೆ. ಎಷ್ಟು ಒತ್ತುವರಿಯಾಗಿದೆ ಎಂದು ಕೇಳಿದರೆ ಅದಕ್ಕೆ ಅವರು ಉತ್ತರ ಹೇಳುತ್ತಾರೆ. ಅಲ್ಲಿ ಒತ್ತುವರಿಯಾಗಿದ್ದರೆ ಆಗಿದೆ ಎಂದು ಹೇಳುತ್ತಾರೆ, ಇಲ್ಲ ಎಂದರೆ ಇಲ್ಲ ಎಂದು ಹೇಳುತ್ತಾರೆ.

ಶ್ರೀ ಕಡಿದಾಳ್ ದಿವಾಕರ್.—ಇದರಲ್ಲಿ ೧೫೦೦ ಎಕರೆಯನ್ನು ಲೀಸ್‌ಗೆ ಕೊಟ್ಟಿದ್ದಾರೆ. ಅವರಿಗೆ ಗ್ರಾಂಟ್ ಮಾಡಿದ್ದಾರೆಯೇ ಎಂದು ಕೇಳಿದರೆ ಅದಕ್ಕೆ ಗ್ರಾಂಟ್ ಮಾಡಿಲ್ಲ ಎಂದು ಹೇಳಿದ್ದಾರೆ. ಕಳೆದ ಸಾರಿ ಕೂಡ ಅವರಿಗೆ ಸ್ವಂತ ಜಮೀನು ೨೧೮೨ ಎಕರೆ ಇದೆಯೆಂದು ಹೇಳಿದ್ದಾರೆ. ಆ ಜಮೀನು ಎಲ್ಲಿಂದ ಬಂತು ಎಂಬುದನ್ನು ಮಾನ್ಯ ಮಂತ್ರಿಯವರು ಹೇಳುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ೧೯೭೭ನೇ ಇಸವಿಯಲ್ಲಿ ಸುಮಾರು ೫೦೦೦ ಎಕರೆಯನ್ನು ಅವರಿಗೆ ಲೀಸ್‌ಗೆ ಕೊಡಬೇಕು ಎಂದು ಹಿಂದಿನ ಸರ್ಕಾರದವರು ನಿರ್ಧಾರ ಮಾಡಿದ ಮೇಲೆ ಕೇವಲ ಅವರ ವಶಕ್ಕೆ ಕೊಟ್ಟಂತಹ ಜಮೀನು ೧೫೦೩ ಎಕರೆ ೧೧ ಗುಂಟೆ ಮಾತ್ರ. ಉಳಿದಂತಹ

ಜಮೀನನ್ನು ಅವರಿಗೆ ಕೊಡಲಿಲ್ಲ. ಆದರೆ ಅವರು ಬೇರೆಯವರಿಂದ ಪರ್ಚೇಸ್ ಮಾಡಿದಂತಹ ಸ್ವಂತ ಜಮೀನು ೨,೨೮೨ ಎಕರೆ ೮ ಗುಂಟೆ ಇದೆ. ಇದರಲ್ಲಿ ಏನಾಗಿದೆ ಎಂದರೆ ೧೫೦೩ ಎಕರೆ ಅವರಿಗೆ ಲೀಸ್‌ಗೆ ಕೊಟ್ಟಿದೆ. ಮತ್ತು ೨,೨೮೨ ಎಕರೆ ಅವರ ಸ್ವಂತ ಜಮೀನಾಗಿದೆ. ಈ ಬಗ್ಗೆ ಅವರು ಎರಡು ಸಾರಿ ಈಗಾಗಲೇ ಡಿಕ್ಲರೇಷನ್ ಕೊಟ್ಟಿದ್ದಾರೆ. ಆದರ ಪ್ರಕಾರ ಫ್ಯಾಕ್ಟರಿಯವರು ಇಟ್ಟುಕೊಳ್ಳಬಹುದಾದ್ದು ಕೇವಲ ೫೦ ಎಕರೆ ಮಾತ್ರ. ಉಳಿಯುತಕ್ಕಂಥಾದ್ದು ಸರ್ಕಾರಕ್ಕೆ ಬರಬೇಕು. ೧೫೦೩ ಎಕರೆಯನ್ನು ಲೀಸ್‌ಗೆ ಕೊಟ್ಟಿದ್ದೇವೆ. ಅಂದರೆ ಅದು ಈ ಡಿಕ್ಲರೇಷನ್‌ನಲ್ಲಿ ಬರುವುದಿಲ್ಲ. ೧೯೫೭ನೇ ಇಸವಿಯಲ್ಲಿ ಲೀಸ್ ಪೀರಿಯಡ್ ೩೦ ವರ್ಷಕ್ಕೆ ಅದನ್ನು ಕೊಟ್ಟಿದೆ, ಈಗ ಆ ಲೀಸ್ ಪೀರಿಯಡ್ ಮುಗಿಯಬೇಕಾದರೆ ಇನ್ನೂ ೫ ವರ್ಷ ಇದೆ. ಈ ೫ ವರ್ಷ ಆದ ಮೇಲೆ ಲೀಸ್‌ನ್ನು ಕ್ಯಾನ್ಸಲ್ ಮಾಡಿ ನಾವು ಅದನ್ನು ವಶಪಡಿಸಿಕೊಳ್ಳಬಹುದು. ಆದರೆ ಉಳಿದಂತಹ ೨೨೮೨ ಎಕರೆ ಏನಿದೆ ಅದರಲ್ಲಿ ೫೦ ಎಕರೆಯನ್ನು ಬಿಟ್ಟು ಉಳಿದದ್ದನ್ನು ನಾವು ತೆಗೆದುಕೊಳ್ಳಬೇಕೆಂದು ಈಗಾಗಲೇ ಟ್ರಿಬ್ಯುನಲ್‌ನಲ್ಲಿ ಆ ರೀತಿಯ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅದರಿಂದಾಗಿ ಅವರು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ೧೯-೨-೧೯೮೨ರಲ್ಲಿ ಸ್ಟೇ ವೆಕೇಟ್ ಆಗಿದೆ. ಅದನ್ನು ವಶಕ್ಕೆ ತೆಗೆದುಕೊಂಡು ಬಡವರಿಗೆ ಹಂಚಬೇಕೆಂದು ಹೇಳಿ ನಾವು ಈಗಾಗಲೇ ಡೆಪ್ಯುಟಿ ಕಮಿಷನರ್‌ರವರಿಗೆ ಡೈರೆಕ್ಷನ್ ಕೊಟ್ಟಿದ್ದೇವೆ. ಅದರ ಪ್ರಕಾರ ಈಗ ಅದರ ಪೊಸೆಷನ್ ತೆಗೆದುಕೊಂಡು ಅದನ್ನು ಬಡವರಿಗೆ ಹಂಚತಕ್ಕಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀ ಕಡಿದಾಳ್ ದಿವಾಕರ್.—ತಾವು ಸ್ಟೇ ವೆಕೇಟ್ ಮಾಡಿಸಿರುವುದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ ಕೊನೆಗಾದರೂ ಕೂಡ ಭಗವಂತ ನಿಮಗೆ ಅಂತಹ ಒಂದು ಶಕ್ತಿಯನ್ನು ಕೊಟ್ಟನಲ್ಲ ಎಂದು. ಅವರ ಹತ್ತಿರ ಬಗರ್‌ಹುಕುಂ ಸಾಗುವಳಿ ಮಾಡತಕ್ಕಂಥ ಜಮೀನು ಎಷ್ಟಿದೆ ಎಂಬುದರ ಬಗ್ಗೆ ತಾವೇನಾದರೂ ಸರ್ವೆ ಮಾಡಿಸಿದ್ದೀರಾ ? ಬೇರೆಯವರ ಲ್ಯಾಂಡ್ಸ್ ಅವರ ಹತ್ತಿರ ಇಲ್ಲ ಎಂದು ಹೇಳಿದ್ದೀರಿ. ತಮಗೆ ಈ ಒಂದು ಆರ್ಡರ್ ಕಾಪಿಯನ್ನು ನಾನು ಕಳಿಸಿಕೊಡುತ್ತೇನೆ, ಆರ್.ಡಿ ೧೩೦ ಸಿಎಂಡಿ ೬೬, ದಿನಾಂಕ ೧-೪-೧೯೬೭ರಲ್ಲಿ ಬೇರೆಯವರಿಗೆ ಗ್ರಾಂಟ್ ಮಾಡಿದ ಭೂಮಿ ಅವರ ಸ್ವಾಧೀನದಲ್ಲಿದೆ. ಅದನ್ನು ಬಿಡಿಸಿಕೊಳ್ಳುವುದಕ್ಕೆ ತಮಗೆ ತಾಪತ್ರಯವೇನಿದೆ ? ಅದರಲ್ಲಿ ಅವರು ಸಾಗುವಳಿ ಮಾಡುತ್ತಿದ್ದಾರೆ. ಅಲ್ಲಿ ಸಾಗುವಳಿ ಮಾಡುತ್ತಿರತಕ್ಕಂಥಾದ್ದನ್ನು ಅವರು ಬಿಟ್ಟುಕೊಟ್ಟಿಲ್ಲ. ಅದನ್ನಾದರೂ ತಕ್ಷಣದಲ್ಲಿ ಬಿಡಿಸಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಬೇರೆ ಬೇರೆ ಬಡಜನರಿಗೆ ಗ್ರಾಂಟ್ ಆಗಿದ್ದನ್ನು ಅವರು ಒತ್ತುವರಿ ಮಾಡಿದ್ದರೆ ಅದನ್ನು ನಾವು ಎವಿಕ್ಟ್ ಮಾಡಿಸಿಕೊಡುತ್ತೇವೆ. ಅದರ ಬಗ್ಗೆ ಇಲ್ಲಿ ಪ್ರಶ್ನೆ ಕೇಳುವುದಕ್ಕೆ ಮುಂಚೆಯೇ ಮಾನ್ಯ ಸದಸ್ಯರು 'ಈ ರೀತಿಯಾಗಿ ಅವರು ಮಾಡಿದ್ದಾರೆ' ಎಂದು ಬರೆದುಕೊಟ್ಟಿದ್ದರೆ ಖಂಡಿತವಾಗಿ ನಾನು ಸಂಬಂಧಪಟ್ಟಂತಹ ಡೆಪ್ಯುಟಿ ಕಮಿಷನರ್‌ರವರನ್ನು ಕರೆಸಿ ಅದನ್ನು ಎವಿಕ್ಟ್ ಮಾಡಿಸುವುದಕ್ಕೆ ಹೇಳುತ್ತಾ ಇದ್ದೆ. ಈಗ ಮಾನ್ಯ ಸದಸ್ಯರು ಅದರ ಸರ್ವೆ ನಂಬರು ಮತ್ತು ಗ್ರಾಂಟೀಸ್ ನೇಮ್‌ಗಳನ್ನು ನಮಗೆ ಕಳಿಸಿಕೊಟ್ಟರೆ ನಾವು ಆ ಬಗ್ಗೆ ಸೂಕ್ತ ಕ್ರಮವನ್ನು ಖಂಡಿತವಾಗಿ ತೆಗೆದುಕೊಳ್ಳುತ್ತೇವೆ. ದೇವರು ಆ ಶಕ್ತಿಯನ್ನು ಈಗ ಕೊಟ್ಟಿದ್ದಾನೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅಲ್ಲದೇ ೧೯೭೮ನೇ ಇಸವಿಯಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ ಎನ್ನತಕ್ಕಂಥ ಮಾತನ್ನು ಕೂಡ ಅವರು ಹೇಳಿದ್ದಾರೆ. ಇದು ೧೯೫೭ನೇ ಇಸವಿಯಲ್ಲಿ ಕೊಟ್ಟದ್ದಾಗಿದೆ. ಹಿಂದೆ ನಾವು ಕೊಟ್ಟದ್ದು ೫೦೦೦ ಎಕರೆ, ಅದರಲ್ಲಿ ಪೊಸೆಷನ್ ತೆಗೆದುಕೊಂಡಿದ್ದು ೧೫೦೩ ಎಕರೆಗೆ ಮಾತ್ರ. ವರ್ಷಕ್ಕೆ ೫೦ ರೂಪಾಯಿಗಳ ಹಾಗೆ ಕೊಟ್ಟಿದ್ದಾರೆ. ನಾವು ಈಗ ಯಾವುದೇ ಫ್ಯಾಕ್ಟರಿಯವರಾಗಲೀ ಅಥವಾ ಗ್ರಾಂಟೀಸ್ ಆಗಲೀ ಈ ರೀತಿಯಾಗಿ ಮಿಸ್‌ಯೂಸ್ ಮಾಡಿದರೆ, ಅವರು ನಮ್ಮಿಂದ ಗ್ರಾಂಟ್ ಪಡೆದುಕೊಂಡು ಅದನ್ನು ಖಿದ್ದಾಗಿ ಇಟ್ಟುಕೊಂಡರೆ ನಾವು ಅಂತಹವರೆಲ್ಲರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಒಂದು ಜನರಲ್ ಸರ್ಕ್ಯುಲರನ್ನು ನಾನು ಇಷ್ಯೂ ಮಾಡುತ್ತೇನೆ, ಅನೇಕ ಜನ ಫ್ಯಾಕ್ಟರಿಯವರಾಗಲೀ ಅಥವಾ ಅನೇಕ ಜನ ಬೇರೆ ಬೇರೆ ಕ್ಯಾಪ್ಸ್ ಬೆಳೆಯುತಕ್ಕಂಥ ರೀತಿಯಲ್ಲಿ ಅನೇಕ ಜಮೀನುಗಳನ್ನು ಇಟ್ಟುಕೊಂಡಿದ್ದರೆ ಅದನ್ನು ಎಲ್ಲಾ ಕಡೆ ಎವಿಕ್ಟ್ ಮಾಡಬೇಕೆಂದು ಮತ್ತು ಆ ರೀತಿ ಮುಂದೆ ಆಗಬಾರದು ಎಂದು ನಾನು ಆದಷ್ಟು ಬೇಗನೆ ಒಂದು ಜನರಲ್ ಇನ್‌ಸ್ಟ್ರಕ್ಷನ್ಸ್‌ನ್ನು ಇಷ್ಯೂ ಮಾಡುತ್ತೇನೆ.

ಶ್ರೀ ಎಸ್, ಎಂ. ಶೀರ್ನಳ್ಳಿ ಚಂದ್ರಶೇಖರ್.—ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನಾನು ಒಂದು ವಿಚಾರವನ್ನು ಮಾನ್ಯ ಮಂತ್ರಿಯವರಿಗೆ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಈ ವರಾಹಿ, ಚಕ್ರ ಮತ್ತು ಸಾವೇಹಕ್ಲು ಈ ಪ್ರಾಜೆಕ್ಟ್‌ಗಳಿಂದಾಗಿ ಬಹಳಷ್ಟು ಜಮೀನು ಮುಳುಗಡೆಯಾಗುತ್ತಿವೆ. ಅವರಿಗೆಲ್ಲಾ ತಲಾ ಒಂದು ಎಕರೆಯಷ್ಟು ಜಮೀನು ಕೊಡುವುದಕ್ಕೆ ಅವರ ಹತ್ತಿರ ಸರ್ಕಾರಿ ಜಮೀನು ಇಲ್ಲ. ಇಂತಹ ಸಂದರ್ಭದಲ್ಲಿ ಆ ಷುಗರ್ ಫ್ಯಾಕ್ಟರಿಯವರು ಸಾವಿರಾರು ಎಕರೆಯಷ್ಟು ಬಗರ್‌ಹುಕುಂ ಮಾಡಿಕೊಂಡಿದ್ದಾರೆ, ಈ ಕೂಡಲೇ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಅದನ್ನು ವಾಪಸ್ಸು ತೆಗೆದುಕೊಂಡು ಅಂತಹ ಸಂತ್ರಸ್ತರಿಗೆ ಹಂಚತಕ್ಕಂಥ ವ್ಯವಸ್ಥೆಯನ್ನು ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗಾಗಲೇ ನಾನು ಹೇಳಿದ್ದೇನೆ. ಅವರು ಹೈಕೋರ್ಟಿಗೆ ಅಪ್ರೋಚ್ ಆಗಿದ್ದರು. ಮತ್ತು ಸ್ಟೇ ತಂದಿದ್ದರು. ಈಗ ಆ ಸ್ಟೇ ವೆಕೇಟ್ ಆಗಿದೆ. ಡಿವಿಷನಲ್ ಬೆಂಚ್ ಮುಂದೆ ಅವರು ಮತ್ತೆ ಅಪೀಲ್ ಹೋಗಿದ್ದಾರೆ. ಆದರೆ ಅವರಿಗೆ ಸ್ಟೇ ಸಿಕ್ಕಿಲ್ಲ, ನಾನು ನಿನ್ನೆಯ ದಿವಸ ಕೂಡ ಸ್ಪೆಷಲ್ ಡಿ.ಸಿಯವರನ್ನು ಕರೆಸಿ 'ಅವರು ಎನ್‌ಕ್ರೋಚ್ ಮಾಡಿದ್ದರೆ ಅದನ್ನು ಎವಿಕ್ಟ್ ಮಾಡಿಸಿ' ಎಂದು ಹೇಳಿದ್ದೇನೆ. ನಮ್ಮ ಸರ್ಕಾರದ ಕಾನೂನಿನ ಪ್ರಕಾರ ಅಂತಹ ಜಮೀನನ್ನು ವಶಕ್ಕೆ ತೆಗೆದುಕೊಂಡು ಲ್ಯಾಂಡ್ ರಿಫಾರಂಸ್ ಕಾನೂನಿನ ಪ್ರಕಾರ ಅದನ್ನು ನಾವು ಹಂಚ ಬೇಕಾಗಿರುತ್ತದೆ. ತಮಗೆ ಗೊತ್ತಿದ್ದ ಹಾಗೆ ಅದರಲ್ಲಿ ೫೦ ಪರ್ಸೆಂಟ್ ಎಸ್.ಸಿ. ಎಸ್.ಟಿ. ಗೆ ಹೋಗುತ್ತದೆ ಮತ್ತು ೫೦ ಪರ್ಸೆಂಟ್ ಇತರೆಯವರಿಗೆ ಹೋಗುತ್ತದೆ, ಇನ್ನು ೫೦ ಪರ್ಸೆಂಟ್‌ನಲ್ಲಿ ವರಾಹಿಯಲ್ಲಿ ಮುಳುಗಡೆಯಾದಂತಹ ರೈತರಿಗೆ ಕೊಡಬೇಕು ಎನ್ನುವ ಅಭಿಪ್ರಾಯವಿದೆ. ಖಂಡಿತ ಅದರ ಬಗ್ಗೆ ಪರಿಶೀಲಿಸಿ ಅದನ್ನು ಕೊಡಿಸುವ ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ೧೫೦೩ ಎಕರೆ ಹಾಗೂ ೧೦ ಗುಂಟೆ ಜಮೀನನ್ನು ಲೀಸ್‌ಗೆ ಕೊಟ್ಟಿದ್ದಾರೆ ಎಂದು ಮಾನ್ಯ ಮಂತ್ರಿಯವರು ಆಗಲೇ ತಿಳಿಸಿದ್ದಾರೆ. ಹಾಗೆ ಕೊಡಬೇಕಾದರೆ ಕರಾರಿನ ಷರತ್ತುಗಳು ಏನೇನು ಎಂಬುದನ್ನು ಅವರು ತಿಳಿಸುವುದಕಾಗುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆ ಷರತ್ತುಗಳು ಏನು ಎಂದರೆ, The period of lease shall be 30 years. The rent for the first five years shall be Rs. 5 per Acre per annum, for the 6th year-Rs. 50, for the 7th year Rs. 60, for the 8th year Rs. 70, for the 9th year Rs. 80 for the 10th year Rs. 90, and from 11th year onward Rs. 100. ಇಷ್ಟನ್ನು ಆದರಲ್ಲಿ ಹೇಳಿದ್ದಾರೆ ಇದಲ್ಲದೇ ೫ ಸಾವಿರ ಎಕರೆಯಲ್ಲಿ ಈಗ ೧೩೩೪ ಎಕರೆಯನ್ನು ಅವರಿಗೆ ಕೊಡಬೇಕು ಮತ್ತು ಉಳಿದಂತಹ ೧೫೦ ಎಕರೆಯನ್ನು ಕೊಡಬೇಕು ಮತ್ತು ಅವರು ಎಲ್ಲೆಲ್ಲಿ ಯಾವ್ಯಾವ ಜಾಗದಲ್ಲಿ ಅದನ್ನು ಕೇಳಿಂತತ್ತಾರೋ ಅಲ್ಲಿ ಕೊಡಬೇಕು ಎಂದು ಅಂದಿನ ಕಾಲದಲ್ಲಿ ಅಂದರೆ ೧೯೭೭ರಲ್ಲಿ ಒಂದು ಗೌರ್ನಮೆಂಟ್ ಆರ್ಡರ್ ಇಷ್ಯೂ ಮಾಡಿದ್ದಾರೆ.

ಶ್ರೀ ಆರ್. ಎಸ್. ನಾಡೋಣಿ.—ಸ್ವಾಮಿ, ಮಾನ್ಯ ಕಡಿದಾಳ್ ದಿವಾಕರ್‌ರವರು ಹೇಳತಕ್ಕಂಥ ಸಮಸ್ಯೆ ಕೇವಲ ಶಿವಮೊಗ್ಗ ಜಿಲ್ಲೆಯಲ್ಲಿ ಇರತಕ್ಕಂಥಾದ್ದು ಅಷ್ಟೇ ಅಲ್ಲ, ಎಲ್ಲಾ ಕಡೆ ಇದೆ. ನನ್ನ ತಾಲ್ಲೂಕಿನಲ್ಲಿ ಕೂಡ ಈ ತರಹ ಕಬ್ಬು ನುರಿಸುವ ಕಾರ್ಖಾನೆಯವರಿಗೆ ಸುಮಾರು ೫೦೦೦ ಎಕರೆಯಷ್ಟು ಹರಿಜನ ಗಿರಿಜನರಿಗೆ ಹೋಗತಕ್ಕಂಥ ಜಮೀನನ್ನು ಲೀಸ್‌ಗೆ ಕೊಟ್ಟಿದ್ದಾರೆ. ಅದನ್ನು ಅವರಿಗೆ ಬಿಡಿಸಿ ಕೊಡುವುದಕ್ಕೆ ಎಲ್ಲಾ ಕಡೆಗೂ ಅನ್ವಯಿಸುವಂತೆ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗಾಗಲೇ ತಮಗೆ ಗೊತ್ತಿದ್ದ ಹಾಗೆ ಲ್ಯಾಂಡ್ ರಿಫಾರಂಸ್ ಆಕ್ಟ್ ಪ್ರಕಾರ ಅದು ಕಂಪನಿಯವರೇ ಇರಲಿ, ಯಾವ ಇನ್‌ಸ್ಟಿಟ್ಯೂಷನ್‌ನವರೇ ಇರಲಿ ಅವರು ಡಿಕ್ಲರೇಷನ್ ಕೊಡಬೇಕಾಗುತ್ತದೆ. ಆ ಡಿಕ್ಲರೇಷನ್ ಪ್ರಕಾರ ನಾವು ಸುಮಾರು ೫೦ ಎಕರೆಯನ್ನು ಷುಗರ್ ಫ್ಯಾಕ್ಟರಿಯವರಿಗೆ ಕೊಟ್ಟಿದ್ದೇವೆ. ಉಳಿದಂತಹ ಜಮೀನನ್ನು ನಾವು ತೆಗೆದುಕೊಳ್ಳಬೇಕು ಎಂದು ಇದೆ. ಮಾನ್ಯ ಸದಸ್ಯರು ಅದು ಯಾವ ಫ್ಯಾಕ್ಟರಿ ಎಂದು ಹೇಳಿದರೆ ಆ ಬಗ್ಗೆ ನಾವು ರಿಕಾರ್ಡ್ ತರಿಸಿನೋಡಿ ಏನು ಸೂಕ್ತ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ.

ಶ್ರೀ ಕಡಿದಾಳ್ ದಿವಾಕರ್.—ಮಾನ್ಯ ಅಧ್ಯಕ್ಷರೇ ನಾನು ಮೂಲಭೂತವಾಗಿ ಪ್ರಶ್ನೆಯನ್ನು ಕೇಳಿದ ಉದ್ದೇಶವಾದರೂ ಏನೆಂದರೆ ವರಾಹಿ ಯೋಜನೆಯಲ್ಲಿ ಸೇರಿಸಬೇಕು ಎನ್ನುವ ಉದ್ದೇಶದಿಂದ ನಾನು ಕೇಳಿದ್ದೇನೆ. ಎರಡನೆಯದಾಗಿ ಎಷ್ಟು ಎಕರೆ ಜಮೀನನ್ನು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಈ ರೀತಿಯಾಗಿ ಬಗರ್‌ಹುಕುಂ ಸಾಗುವಳಿ ಮಾಡುವವರ ಮೇಲೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಸಾವಿರಾರು ಎಕರೆ ಜಮೀನು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಅಲ್ಲಿ ಇವತ್ತು ಸುಮಾರು ೫ ಸಾವಿರ ಎಕರೆ ಜಮೀನು ಬಗರ್‌ಹುಕುಂ ಮಾಡುತ್ತಿದ್ದಾರೆ. ಅಲ್ಲಿ ಬೆಳೆಯು ಎಂತಹ ಕಬ್ಬನ್ನು ಯಾರು ತೆಗೆದುಕೊಳ್ಳುತ್ತಿಲ್ಲ. ಅಲ್ಲಿ ಒಂದು ರೀತಿ ಮನಾಪಲಿ ನಡೆಯುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸುವರೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ್ದೇನೆ. ಅಲ್ಲಿ ಬೆಳೆಯುತ್ತಿದ್ದಂತಹ ಕಬ್ಬನ್ನು ಸರ್ಕಾರದವರೇ ಕಡಿದುಕೊಳ್ಳುತ್ತಿದ್ದರು ಮತ್ತೆ ಲ್ಯಾಂಡ್ ರಿ ಫಾರಂ ಪ್ರಕಾರ ಯಾರ್ಯಾರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೋ ಅದರಲ್ಲಿ ಸುಮಾರು ೫೦ ಪರ್ಸೆಂಟ್ ವೀಕರ್ ಸೆಕ್ಷನ್ಸ್‌ಗೆ ಕೊಡಬೇಕೆಂದು ಇದೆ. ಮತ್ತೆ ಇದರಲ್ಲಿ ಯಾರ್ಯಾರು ಬಗರ್‌ಹುಕುಂ ಮಾಡಿದ್ದಾರೋ ಅಂತಹವರನ್ನು ಜಮೀನಿನಿಂದ ಎವಿಕ್ಟ್ ಮಾಡುವಂತೆ ನಾನು ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳಿಗೂ ತಿಳಿಸುತ್ತೇನೆ.

Subjects included in the Pre-Universfty Course

572. SRI G. BASAVANNAPPA (Holehonnur).—Will the Minister for Education be pleased to state:—

(a) number of subjects included in imparting instruction to Pre-University Classes in Karnataka;

(b) whether population education is included among them;

(c) whether there is any proposal to include the same, if so when?

SRI G.B. SHANKARA RAO (Minister for Education).—

(a) 13 Language subjects under Part-I and 25 optional subjects under Part-II are introduced for study.

(b) No

(c) The matter is under Examination.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ ಪಾಪ್ಯುಲರ್ ಎಜುಕೇಶನ್ ಬಗ್ಗೆ ಡಾಕ್ಟರ್ ಗೋಕಾಕ್ ರವರು ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದರು. ಆ ಕಮಿಟಿಯವರ ಪ್ರಕಾರ ಪಾಪ್ಯುಲರ್ ಎಜುಕೇಶನ್‌ನಲ್ಲಿ ಆಪ್ಷನಲ್ಸ್ ಸಬ್‌ಜಕ್ಟ್‌ಸ್ ತೆಗೆದು ಕೊಳ್ಳಬೇಕೆಂದು ಅವರು ರೆಕ್‌ಮೆಂಡ್ ಮಾಡಿದ್ದರೂ ಸಹ ತಾವು ತೆಗೆದುಕೊಂಡಿಲ್ಲ. ಇದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲವೇ.? ಇದ್ದರೆ ಈ ಆಪ್ಷನಲ್ಸ್ ಸಬ್‌ಜಕ್ಟ್‌ಸ್ ಏತಕ್ಕೆ ತೆಗೆದುಕೊಳ್ಳಬಾರದು.?

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಿಗೆ ಉತ್ತರ ಹೇಳುವಾಗ ಇದನ್ನು ಸ್ವಲ್ಪ ತಿದ್ದುಪಡಿ ಮಾಡಿಕೊಂಡು ಉತ್ತರ ಹೇಳಬೇಕಾಗುತ್ತದೆ. To the question the reply given is "The matter is under examination." It should be read as "No". ಅದನ್ನು ಮಾನ್ಯ ಸದಸ್ಯರು ಸಹ ತಿದ್ದುಪಡಿ ಮಾಡಿಕೊಳ್ಳಬೇಕು.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ ಇದನ್ನು ತಾವು ಎನ್‌ಕ್ವೈರಿ ಮಾಡುವ ಯೋಚನೆ ಏನಾದರು ಸರ್ಕಾರಕ್ಕೆ ಇದೆಯೇ.?